## ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 4604/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಸಂಗಮ್ಮ |
| ತಂದೆಃ ಗಂಡ | ಃ | ಕಮಲಾಕರ್ ಕಂಟ್ಲೆ |
| ವಯಸ್ಸು | ಃ | ೫೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಖಜೂರಿ |

ದಿನಾಂಕಃ೧೬.೧೦.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ ನನ್ನ ಮೈದುನ, ಆರೋಪಿ ನಂ.೫ ಭಾವ, ಆರೋಪಿ ನಂ.೨, ೩, ೪ ಆರೋಪಿ ನಂ.೧ ರವರ ಮಕ್ಕಳು, ಆರೋಪಿ ನಂ.೬, ೭ ಆರೊಪಿ ನಂ. ೫ ರವರ ಮಕ್ಕಳು. ಚಾಸಾ-೧, ನನ್ನ ಗಂಡ, ಚಾಸಾ-೫ ನನ್ನ ಮಗ, ಚಾಸಾ-2, 3, 6 ರಿಂದ 8 ರವರ ಪರಿಚಯ ಇರುತ್ತದೆ.

ಈಗ 2 ವರ್ಷಗಳ ಹಿಂದೆ ಬೆಳಿಗ್ಗೆ 6.30 ಗಂಟೆಗೆ ನಾನು ಮನೆಯ ಅಂಗಳ ಕಸ ಗುಡಿಸುತ್ತಿರುವಾಗ ಆರೋಪಿ ನಂ.೧ ರಿಂದ ೭ ರವರು ಬಂದು ಚಾಸಾ-೧ ರವರು ಎಲ್ಲಿ ಹೋಗಿರುತ್ತಾರೆ ಎಂದು ಕೇಳಿದರು, ಆಗ ನಾನು ಅವರಿಗೆ ಚಾಸಾ-೧ ರವರು ಹೊರಗಡೆ ಹೋಗಿದ್ದಾರೆ ಎಂದು ಹೇಳಿರುತ್ತೇನೆ. ಎಲ್ಲಾ ಆರೋಪಿತರು ನನಗೆ ಹೊಲದ ವಿಷಯವಾಗಿ ಬಂದರೆ ನಿಮ್ಮನ್ನು ಕಡಿಯುತ್ತೇವೆ, ಬಡಿಯುತ್ತೇವೆ ಎಂದು ಹೆದರಿಕೆ ಹಾಕಿರುತ್ತಾರೆ. ಆರೋಪಿ ನಂ.೨ ನನ್ನ ಮೆಲಕಿನ ಮೇಲೆ ಹೊಡೆದನು. ಅಷ್ಟರಲ್ಲಿ ಚಾಸಾ-೧ ರವರು ಹೊರಗಡೆಯಿಂದ ಬಂದರು. ಆಗ ಆರೋಪಿತರೆಲ್ಲರೂ ತಮ್ಮ ಕೈಯಲ್ಲಿದ್ದ ಬಡಿಗೆಯಿಂದ ಹೊಡೆ ಬಡೆ ಮಾಡಲು ಪ್ರಾರಂಭಿಸಿದರು, ಆಗ ನಾನು ಹೋಗಿ ಬಿಡಿಸಿದೆನು, ನನಗೂ ಅವರು ಹೊಡೆ ಬಡೆ ಮಾಡಿರುತ್ತಾರೆ. ನಂತರ ಚಾಸಾ-6 ರಿಂದ 8 ರವರು ಬಂದು ಜಗಳ ಬಿಡಿಸಿದರು. ನಂತರ ನಾವು ಆಸ್ಪತ್ರೆಗೆ ಬಂದಿರುತ್ತೇವೆ, ನಂತರ ಪೋಲಿಸರು ಬಂದು ಆಸ್ಪತ್ರೆಯಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-೧ ಎಂದು ಗುರುತಿಸಲಾಯಿತು. ನಂತರ ಪೋಲಿಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆ ಜರುಗಿಸಿರುತ್ತಾರೆ, ಪಂಚನಾಮಗೆ ನಾನು ಸ್ಥಳ ತೋರಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎರಡು ಕಟ್ಟಿಗೆಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಮು.ಮಾ-೧ ಮತ್ತು ೨ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಆರೋಪಿ ನಂ.೧ ಏ ರಂಡಿ ಎಂದು ನನಗೆ ಅವಾಚ್ಯವಾಗಿ ಬೈದರು ಎಂಥರೆ ಸರಿ. ಆರೋಪಿ ನಂ.೩ ಮತ್ತು ೪ ವರು ಏ ರಂಡಿ ಹೊರಗಡೆ ಬಾ ನಿನ್ನ ಒಂದು ಕೈ ನೋಡಿಕೊಳ್ಳುತ್ತೇವೆ ಎಂದು ಜೀವದ

ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿ ನಂ.೫ ಚಾಸಾ-೧ ರವರಿಗೆ ಏ ರಂಡಿ ಮಗನೇ ಎಲ್ಲಿ ಹೋಗುತ್ತಿದ್ದೀಯಾ ಎಂದು ಬೈದು ತಡೆದು ನಿಲ್ಲಿಸಿದರು ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ</u>** <u>ನಂ.೧ ರಿಂದ ೪, ೬, ೭ರ ಪರ ಶ್ರೀ ಸಿ.ಎಸ್.ಟಿ.</u> **<u>ವಕೀಲರಿಂದ</u>**

ಆರೋಪಿ ನಂ.೧ ನನ್ನ ಗಂಡನ ತಮ್ಮ. ಪೋಲಿಸರು ನನ್ನ ಹೇಳಿಕೆಯನ್ನು ಘಟನೆ ಆದ ಮರುದಿನವೇ ತೆಗೆದುಕೊಂಡಿರುತ್ತಾರೆ. ನಮ್ಮ ಜಮೀನು ಮತ್ತು ಆರೋಪಿ ನಂ.೧ ರಿಂದ ೭ ರವರ ಜಮೀನು ಒಂದಕ್ಕೊಂದು ಹತ್ತಿ ಹೊಂದಿಕೊಂಡಿವೆ ಎಂದರೆ ಸರಿ. ಆರೋಪಿತರು ಮತ್ತು ನಮ್ಮ ನಡುವೆ ಜಗಳವು ಬಂದಾರಿ ಸಲುವಾಗಿ ಆಗಿರುತ್ತದೆ. ಚಾಸಾ-೧, ಆರೋಪಿ ನಂ.೧ ಮತ್ತು ೫ ರವರು ನ್ಯಾಯಾಲಯದಲ್ಲಿಯೇ ಪಾಲು ವಾಟ್ನಿ ದಾವೆ ನಂ.510/1999 ರಲ್ಲಿ ಹೂಡಿ ರಾಜಿ ಅರ್ಜಿಯ ಮೂಲಕ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಒಟ್ಟು 15 ಎ-35 ಗುಂಟೆ ಜಮೀನು ಆರೋಪಿ ನಂ.೧ ರವರ ಪಾಲಿಗೆ ಬಂದಿರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ಡಿಕ್ರಿ ಆದ ನಂತರ ಅವನಿಗೆ ಬಂದ ಭಾಗ 15 ಎ-35 ಗುಂಟೆ ಜಮೀನಿನಲ್ಲಿ ಆರೋಪಿ ನಂ.೧ ರವರೇ ಕಬ್ಜಾ ವಹಿವಾಟಿಯಲ್ಲಿರುತ್ತಾರೆ ಎಂಧರೆ ಸರಿ. ಸದರಿ ಆರೋಪಿ ನಂ.೧ ರವರಿಗೆ ಬಂದ 15 ಎ-35 ಗುಂಟೆ ಜಮೀನಿನ ಪೈಕಿ 2 ಎಕರೆ ಜಮೀನನ್ನು ನಾವು ಒತ್ತುವರಿ ಮಾಡಿಕೊಂಡಿರುತ್ತೇವೆ ಎಂಧರೆ ಸರಿ ಅಲ್ಲ. ನಾವು ಆರೋಪಿ ನಂ.೧ ರವರ ಜಮೀನನ್ನು ಒತ್ತುವರಿ ಮಾಡಿರುತ್ತೇವೆ ಎಂದು ಹೇಳಿ 2009 ರಲ್ಲಿ ದಾವಾ ಸಂಖ್ಯೆ 154/2009 ನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಆರೊಪಿ ನಂ.೧ ಹೂಡಿದ ನಂತರ ಅವರ ಮತ್ತು ನಮ್ಮ ನಡುವೆ ವೈಮನಸ್ಸು ಇರುತ್ತದೆ ಮತ್ತು ಸಂಬಂಧ ಸರಿ ಇಲ್ಲ ಎಂದರೆ ಸರಿ. ನಾವು ಆರೊಪಿ ನಂ.೧ ರವರ 2 ಎಕರೆ ಜಮೀನನ್ನು ಕಾನೂನು ಬಾಹೀರವಾಗಿ ಬಿತ್ತು ಬೆಳೆ ಮಾಡಿರುತ್ತೇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2009 ರಲ್ಲಿ ದಾವಾ ನಂ. 154/2009 ನ್ನು ಆರೋಪಿ ನಂ.೧ ಹೂಡಿದ್ದರು, ಅದು ಅವರ ಪರವಾಗಿ ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೊಪಿ ನಂ.೧ ರವರು ಸದರಿ ದಾವೆ ಡಿಕ್ರಿ ಆದ ನಂತರ ಇ.ಪಿ.ಅರ್ಜಿ ಹಾಕಿ ಸದರಿ 2 ಎಕರೆ ಜಮೀನನ್ನು ತಮ್ಮ ಕಬ್ಜೆಯಲ್ಲಿ ನಮ್ಮಿಂದ ಪಡೆದುಕೊಂಡಿರುತ್ತಾರೆ ಎಂದರೆ ಸರಿ ಅಲ್ಲ.

ಸದರಿ ಓ.ಎಸ್. ನಂ.510/1999 ರಲ್ಲಿ ರಾಜಿ ಡಿಕ್ರಿಯ ಪ್ರಕಾರ ಚಾಸಾ-೧ ರವರಿಗೆ 12 ಎಕರೆ ಜಮೀನು ಬಂದಿರುತ್ತದೆ ಎಂಧರೆ ಸರಿ. ಆರೊಪಿತರು ಇ.ಪಿ. ಅರ್ಜಿ ಹಾಕಿ ಸದರಿ ೨ಎಕರೆ ಜಮೀನನ್ನು ನಮ್ಮ ಬಳಿಯಿಂದ ಕಬ್ಜಾ ಪಡೆದುಕೊಂಡ ನಂತರ ಅವರ ಮೇಲಿರುವ ದ್ವೇಷದಿಂದ ಈ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಸದರಿ 2 ಎಕರೆ ಜಮೀನನ್ನು ಆರೋಪಿತರು ನಮ್ಮ ಬಳಿಯಿಂದ ಕಬ್ಜಾ ಪಡೆದುಕೊಂಡು ಫಲವತ್ತಾಗಿ ಮಾಡಿ, ಸರಿಯಾಗಿ ಬೆಳೆ ಬೆಳದುಕೊಳ್ಳುತ್ತಿದ್ದಾರೆ, ಅದನ್ನು ಸಹಿಸದ ನಾವು ಈ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ರವರು ಜೆ.ಸಿ.ಬಿ ಹಚ್ಚಿ ನಮ್ಮ ಬಂದಾರಿಯನ್ನು ಒಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೨ ರವರು ಬಂದು ನನ್ನ ಮೆಲಕಿಗೆ ಹೊಡೆದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೊಪಿ ನಂ.೫ ನಮಗೆ ಅವಾಚ್ಯ ಶಬ್ದಗಳಿಂದ ಬೈದ, ತಡೆ ಹಿಡಿದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.6 ಮತ್ತು 7 ರವರು ಚಾಸಾ-೧ ರವರನ್ನು ಬಡಿಗೆಯಿಂದ ಹೊಡೆ ಬಡೆ ಮಾಡಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಮು.ಮಾ-೧ ಮತ್ತು ೨ ರಿಂದ ಆರೋಪಿತರು

ಯಾವತ್ತು ಹೊಡೆ ಬಡೆ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಜಗಳವನ್ನು ಚಾಸಾ-೬ ರಿಂದ 8 ರವರು ಬಿಡಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ** ನಂ.5 ಪರ ಶ್ರೀ ಡಿ.ಎಸ್.ಎನ್. **ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಫಿರ್ಯಾದಿಯನ್ನು ನಾನು ಹೇಳಿ ಬರೆಸಿರುತ್ತೇನೆ. ನಿಪಿ-೧ ನಾವು ಗಣಕೀಕೃತ ಮಾಡಿಸಿಕೊಟ್ಟ ಫಿರ್ಯಾದಿ ಇರುತ್ತದೆ ಎಂದರೆ ಸಾಕ್ಷಿ ನಾವು ಬರೆಯಿಸಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹೇಳಿ ಪೋಲಿಸ್ ಠಾಣೆಯಲ್ಲಿ ಗಣಕೀಕೃತ ಮಾಡಿಸಿಕೊಟ್ಟಿರುತ್ತೇನೆ. ಮು.ಮಾ-೧ ಮತ್ತು ೨ ರಂತಹ ಕಟ್ಟಿಗೆಗಳು ಸಾಮಾನ್ಯವಾಗಿ ಎಲ್ಲಾ ಕಡೆ ದೊರೆಯುತ್ತವೆ ಎಂಧರೆ ಸರಿ, ಸಾಕ್ಷಿ ಮುಂದುವರೆದು ನಮ್ಮ ಮನೆಯ ಮುಂದೆ ಇರುವ ಕಟ್ಟಿಗೆಗಳನ್ನು ತೆಗೆದುಕೊಂಡು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಮು.ಮಾ-೧ ರಿಂದ ಯಾರು ಹೊಡೆದರು, ಮು.ಮಾ-೨ ರಿಂದ ಯಾರು ಹೊಡದರು ಎಂದು ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿ ಇಲ್ಲ ಎಂಧು ನುಡಿಯುತ್ತಾರೆ. ಸದರಿ ಘಟನೆ ಆಗಿದೆ ಎಂದು ಹೇಳುತ್ತಿರಲ್ಲ, ಎಲ್ಲಿ ಗಾಯವಾಗಿರುತ್ತದೆ ಎಂಧರೆ ಸಾಕ್ಷಿ ಭುಜಕ್ಕೆ ಮತ್ತು ಸೊಂಟಕ್ಕೆ ಗಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಸೊಂಟಕ್ಕೆ ಕಲ್ಲಿನಿಂದ ಹೊಡೆದಿರುತ್ತಾರೆ. ಕಲ್ಲಿನಿಂದ ನನ್ನ ಸೊಂಟಕ್ಕೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ.

ಆರೊಪಿ ನಂ.೫ ನನ್ನ ಗಂಡನ ವಿರುದ್ದ 2018 ರಲ್ಲಿ ಇದೇ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿರುತ್ತಾನೆ ಎಂದರೆ ಸರಿ, ಅದರ ಸಂಖ್ಯೆ ಅಸಲು ದಾವೆ ನಂ. 69/2018 ಇರುತ್ತದೆ ಎಂಧರೆ ಸರಿ. ಸದರಿ ದಾವೆಯಲ್ಲಿರುವ ದಾವಾ ಆಸ್ತಿ ಹಿರಿಯರ ಆಸ್ತಿ ಎಂದರೆ ಸರಿ. ಸದರಿ ದಾವೆಯ ದಾವಾ ಆಸ್ತಿಯನ್ನು ನನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತೆನೆ ಎಂಧರೆ ಸರಿ. ಆ ಕಾರಣದಿಂದ ಆರೋಪಿ ನಂ.೫ ನನ್ನ ವಿರುದ್ದ ಮತ್ತು ಚಾಸಾ-೧ ರವರ ವಿರುದ್ದ ದಾವೆಯನ್ನು ಹೂಡಿರುತ್ತಾನೆ ಎಂಧರೆ ಸರಿ. ಸದರಿ ದಾವೆಯನ್ನು ಹಿಂದಕ್ಕೆ ಪಡೆದುಕೋ ಇಲ್ಲದಿದ್ದರೆ ನಿನ್ನ ಮೇಲೆ ಕೇಸ್ ಮಾಡುತ್ತೇನೆ ಎಂದು ನಾನು ಆರೋಪಿ ನಂ.೫ ರವರಿಗೆ ಹೆದರಿಸುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಘಟನೆ ನಡೆದೆ ಇರುವುದಿಲ್ಲ, ಯಾವುದೇ ಘಟನೆ ನಡೆಯದಿದ್ದರೂ ಸದರಿ ದಾವೆಯನ್ನು ಆರೋಪಿ ನಂ-೫ ದಾವೆಯನ್ನು ಹಿಂದಕ್ಕೆ ಪಡೆಯದ ಕಾರಣ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂಧರೆ ಸರಿ ಅಲ್ಲ. ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ